- - ಸಿ.ಸಿ.

**ನಂ.1634/2024**

**ಪಿ. ಡಬ್ಲ್ಯೂ: 1**

**( ಇಂದು ದಿಃ 13 /03/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀಮತಿ ಎನ ಟಿ ಎನ ವಕೀಲರಿಂದ,**

ನಾನು ಪಿರ್ಯಾದಿ ಸಂಸ್ಥೆಯಲ್ಲಿ ಕಳೆದ 28 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ನಾನು ಕಳೆದ 03 ವರ್ಷದಿಂದ ಸದರಿ ಸಂಸ್ಥೆಯಲ್ಲಿ ಸಹಾಯಕ ಕಾರ್ಯನಿರ್ವಾಹಕನಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಆರೋಪಿಗೆ ವೈಯಕ್ತಿಕ ಸಾಲ ನೀಡಿದ್ದು ಸಾಲ ನೀಡುವಾಗ ಸಾಲದ ಅರ್ಜಿ , ಸಾಲದ ಹಣ ಕೊಡುವಾಗ ಸಾಲದ ಕರಾರು , ಡಿ ಪಿ ಎನ , ಸ್ವೀಕೃತಿ ರಶೀದಿ ಪಡೆದಿರುತ್ತೇವೆ. ದಿಃ 25.10.2022 ರಂದು ಆರೋಪಿ ಸಾಲದ ಅರ್ಜಿ ಸಲ್ಲಿಸಿದ್ದು ದಿಃ 28.10.2022 ರಂದು ಸಾಲ ಮಂಜೂರು ಮಾಡಿದ್ದು ಇರುತ್ತದೆ. ಆರೋಪಿಗೆ 60 ಕಂತುಗಳ ಸಾಲ ನೀಡಿದ್ದು ಆರೋಪಿ ಎಷ್ಟು ಕಂತನ್ನು ಇದುವರೆಗೆ ಕಟ್ಟಿದ್ದಾರೆ ಎಂದು ದಾಖಲೆ ನೋಡಿ ಹೇಳಬಹುದು. ಸಾಲ ಕಟ್ಟು ಬಾಕಿ ಆದಾಗ ನೊಟೀಸನ್ನು ಆರೋಪಿಗೆ ನೀಡಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಲ ವಸೂಲಿಗೆ ಹೋದಾಗ ಲೆಕ್ಕಾಚಾರ ಕೇಳಿ ಬ್ಯಾಂಕಿಗೆ ಬಂದು ಚೆಕ್ಕನ್ನು ನೀಡಿದ್ದಾರೆ. ಆರೋಪಿ ಹಿಂದಿನ ಸಾಲದ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಹಣ ನೀಡಲು ಬಾಕಿ ಇಲ್ಲಾ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**